- - ಸಿ.ಸಿ.

ನಂ.2101/2024

ಪಿ. ಡಬ್ಲ್ಯೂ: 1

( ಇಂದು ದಿಃ 04/02/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ ಬಿ ಬಿ ವಕೀಲರಿಂದ,**

ನಾನು ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತೇನೆ. ನನಗೆ ತಿಂಗಳಿಗೆ ರೂ. 20,000 ಸಂಬಳ ಇದೆ. ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತೇನೆಂದು ನಾನು ದೂರಿನಲ್ಲಿ ಹೇಳಿಲ್ಲಾ. ನನಗೆ ಪಡಿತರ ಚೀಟಿ ಇದೆ. ನನ್ನ ಕುಟುಂಬದ ಆದಾಯ ಜಿರೋ ಇದೆ. ಆರೋಪಿಯ ಪರಿಚಯ ನನಗೆ 5 ವರ್ಷಗಳಿಂದ ಇದೆ. ಆರೋಪಿಯ ಮನೆ ಶಿರಾಲಿಯಲ್ಲಿ ಇದೆ . ಆರೋಪಿ ಶಿರಾಲಿಯ ಯಾವ ಸ್ಥಳದಲ್ಲಿ ಇರುತ್ತಾರೆಂದು ನನಗೆ ಮಾಹಿತಿ ಇಲ್ಲಾ. ನನ್ನ ಮತ್ತು ಆರೋಪಿ ನಡುವೆ ಸದರಿ ಪ್ರಕರಣ ದಾಖಲಿಸುವ ಮೊದಲು ಜಾಗದ ವ್ಯವಹಾರ 2019 ರಲ್ಲಿ ಆಗಿತ್ತು. ನಮ್ಮ ಕುಟುಂಬಕ್ಕೆ 1 ಆಸ್ತಿ ಇತ್ತು ಅದೂ ಸಹ ಮಾರಾಟ ಆಗಿದ್ದು ಅದರ ಸರ್ವೆ ನಂಬರ್ ಹೇಳಲು ಆಗುವುದಿಲ್ಲ. ನನ್ನ ಕುಟುಂಬದಲ್ಲಿ 3 ಜನ ಅಣ್ಣತಮ್ಮಂದಿರು ಹಾಗೂ ಇಬ್ಬರು ಅಕ್ಕತಂಗಿಯರು ಇದ್ದಾರೆ. ನಾವು 11 ಜನ ಸೇರಿಕೊಂಡು ನೊಂದಣಿ ಜಿಪಿಎ ಯನ್ನು ದಿಃ 03.10.2019 ರಂದು ಆರೋಪಿಗೆ ನೀಡಿದ್ದು ಇರುತ್ತದೆ. ಸದರಿ ಜಿಪಿಎ ದರಲ್ಲಿ ಬರೆದಿರುವ ಸರ್ವೆ ನಂಬರ್ ನನಗೆ ನೆನಪಿಲ್ಲಾ. ಜಿಪಿಎ ಯನ್ನು ಜಾಗ ಖರೀದಿ ಮಾಡಲು ಆರೋಪಿಗೆ ನೀಡಿರುತ್ತೇವೆ. ಜಿಪಿಎ ಆದಾರದ ಮೇಲೆ ಆರೋಪಿಯು ಜಾಗವನ್ನು ಮಾರಾಟ ಮಾಡಿದ ಬಗ್ಗೆ ನನಗೆ ನೆನಪಿಲ್ಲ. ಜಿಪಿಎಯಲ್ಲಿ ಹೇಳಿದ ಜಾಗದ ಮೌಲ್ಯವು 2019 ರಲ್ಲಿ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಜಿಪಿಎಯನ್ನು ಮಾಡುವ ಕಾಲಕ್ಕೆ ಆರೋಪಿ ನಮಗೆ ಯಾವುದೇ ಹಣ ನೀಡಿದ್ದು ಇಲ್ಲಾ. ಆರೋಪಿ 1 ತಿಂಗಳಲ್ಲಿ ಹಣವನ್ನು ವಾಪಸ್ಸು ಮಾಡುತ್ತೇನೆಂದು ನನ್ನ ಬಳಿಯಿಂದ ರೂ. 5,50,000 ಸಾಲ ಪಡೆದಿದ್ದರು. ಆರೋಪಿಗೆ ಸಾಲವನ್ನು 5 ವರ್ಷದ ಹಿಂದೆ ನೀಡಿರುತ್ತೇನೆ. ರೂ. 5,50,000 ಸಾಲವನ್ನು ನೀಡುವಾಗ ಆರೋಪಿ ಬಳಿಯಿಂದ ನಾನು 1 ಚೆಕ್ಕು ನಂ.011915 ಅನ್ನು ಪಡೆದಿರುತ್ತೇನೆ. ಆರೋಪಿಯ ಚೆಕ್ಕು ನಂ.011916 ನನ್ನ ತಾಬಾದಲ್ಲಿ ಇಲ್ಲಾ. ಜಿಪಿಎ ಆಧಾರದ ಮೇಲೆ ಮಾರಾಟ ಮಾಡಿದ ಆಸ್ತಿಯ ಮೌಲ್ಯ ಎಷ್ಟು ಇತ್ತು ಎಂದರೆ ಅದೇ ವ್ಯವಹಾರ ಬೇರೆ ಇದೇ ವ್ಯವಹಾರ ಬೇರೆ ಆದರೆ ಆರೋಪಿ ನನಗೆ ರೂ. 5,50,000 ಬಾಕಿ ಇದೆ ಅದರ ಬಗ್ಗೆ ಮಾತ್ರ ಕೇಳಿ ಎಂದು ಸಾಕ್ಷಿ ಉತ್ತರ ನೀಡಿರುತ್ತಾರೆ. ಜಿಪಿಎ ನೀಡುವ ಕಾಲಕ್ಕೆ ಆರೋಪಿಯಿಂದ ಚೆಕ್ಕು ನಂ.011915 ಮತ್ತು 011916 ಅನ್ನು ಪಡೆದಿರುತ್ತೇವೆ ಎಂದರೆ ಸರಿ. ದಿಃ 05.10.2019 ರಂದು ಆರೋಪಿಯು ಚೆಕ್ಕಿನ ಮೂಲಕ ನನಗೆ ರೂ. 5,00,000 ನೀಡಿರುತ್ತಾರೆ ಎಂದರೆ ಸಾಕ್ಷಿಯು ಆರೋಪಿ ಹಲವಾರು ಬಾರಿ ನನಗೆ ಹಣ ನೀಡಿದ್ದಾರೆಂದು ಉತ್ತರ ನೀಡಿರುತ್ತಾರೆ. ಆರೋಪಿ ಯಾವ ದಿನಾಂಕಕ್ಕೆ ಹಣ ನೀಡಿದ್ದಾರೆಂದು ನನಗೆ ನೆನಪಿಲ್ಲ. ಜಿಪಿಎ ಯಾದ 2 ದಿನಗಳ ನಂತರ ನನಗೆ ಆರೋಪಿಯು ರೂ. 5 ಲಕ್ಷ ಹಣ ನೀಡಿದ್ದರು. ದಿಃ 21.12.2021 ರಂದು ಆರೋಪಿ ಚೆಕ್ಕಿನ ಮೂಲಕ ನನಗೆ ರೂ. 20 ಲಕ್ಷ ನೀಡಿರುತ್ತಾರೆ ಎಂದರೆ ಸಾಕ್ಷಿ ನನ್ನ ಪ್ರಕರಣವೇ ಬೇರೆ ಇದೆ ಎಂದು ಉತ್ತರ ನೀಡಿರುತ್ತಾರೆ. ಜಾಗದ ವ್ಯವಹಾರ ಹೊರತುಪಡಿಸಿ ಆರೋಪಿ ಹಾಗೂ ನನ್ನ ನಡುವೆ ಬೇರೆ ಯಾವುದೇ ವ್ಯವಹಾರ ಇಲ್ಲಾ ಎಂದರೆ ಸಾಕ್ಷಿ ನನ್ನ ಪ್ರಕರಣವೇ ಬೇರೆ ಇದೆ ಎಂದು ಉತ್ತರ ನೀಡಿರುತ್ತಾರೆ. ದೂರು,

ನೊಟೀಸು ಹಾಗೂ ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿಗೆ ಯಾವ ದಿನಾಂಕಕ್ಕೆ ರೂ 5,50,000 ಲಕ್ಷ ನೀಡಿದ್ದೇನೆಂದು ನಮೂದು ಮಾಡಿದ್ದು ಇಲ್ಲಾ. ಸಾಲ ನೀಡುವ ಕಾಲಕ್ಕೆ ಕರಾರು ಪತ್ರ ಮಾಡಿರುತ್ತೇವೆ. ಸಾಲ ನೀಡುವಾಗ ಆರೋಪಿ ಚೆಕ್ಕು ಹಾಗೂ ಕರಾರುಪತ್ರ ನನಗೆ ನೀಡಿರುತ್ತಾರೆ. ಕರಾರು ಪತ್ರವನ್ನು ಹಾಗೂ ಚೆಕ್ಕನ್ನು ನೀಡಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕನ್ನು ಹೊರತುಪಡಿಸಿ ಆರೋಪಿಯ ಇನ್ನೊಂದು ಚೆಕ್ಕು ನನ್ನ ಬಳಿ ಇದೆ ಎಂದರೆ ನನ್ನ ಪ್ರಕರಣವೇ ಬೇರೆ ಎಂದು ಸಾಕ್ಷಿ ಉತ್ತರ ನೀಡಿರುತ್ತಾರೆ. ಹಾಜರುಪಡಿಸಿದ ಎಲ್ಲಾ ದಾಖಲೆಗಳನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕರಾರುಪತ್ರದ ಬಾಂಡ್ ಪೇಪರನ್ನು ಆರೋಪಿ ತಂದಿದ್ದರು. ಕರಾರುಪತ್ರದಲ್ಲಿ ಆರೋಪಿ ಎಷ್ಟು ಸಹಿ ಮಾಡಿದ್ದರೆಂದು ನನಗೆ ನೆನಪಿಲ್ಲ. ನಾನು ಕರಾರುಪತ್ರದಲ್ಲಿ ಒಂದು ಅಥವಾ ಎರಡು ಸಹಿ ಮಾಡಿರಬಹುದು. ಕರಾರು ಪತ್ರ 3 ವರ್ಷದ ಹಿಂದೆ ಆಗಿದ್ದು ಇರುತ್ತದೆ. ಕರಾರುಪತ್ರ ಹಾಗೂ ಚೆಕ್ಕನ್ನು ಆರೋಪಿ ತಯಾರಿಸಿ ನನಗೆ ನೀಡಿದ್ದರು. ಕರಾರುಪತ್ರದಲ್ಲಿ ಇರುವ ಸಹಿ ಆರೋಪಿಯದು ಇಲ್ಲಾ ಎಂದರೆ ಸರಿಯಲ್ಲ. ವಕೀಲರ ನೊಟೀಸಿನಲ್ಲಿರುವ ಆರೋಪಿಯ ವಿಳಾಸ ತಪ್ಪಾಗಿದೆ ಎಂದರೆ ಸರಿಯಲ್ಲ. ಆರೋಪಿಗೆ ವಕೀಲರ ನೊಟೀಸು ಜಾರಿ ಆಗಿಲ್ಲಾ ಎಂದರೆ ಸರಿಯಲ್ಲ. ದೂರಿನಲ್ಲಿ ಸುಳ್ಳು ಕಥೆ ಹೇಳಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**
**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**